ಮೊದಲು, ‘ಅತ್ತೆ... ಅಕ್ಕ ಪಕ್ಕದವರು ನೆಂಟರು’ ಎಂದು ರಾಗವೆಳೆದವಳು ಕೊನೆಗೆ, ‘ಆಯಿತು ಅತ್ತೆಯನ್ನ ನಾನು ಒಪ್ಪಿಸ್ತೇನೆ ನೀವೇನು ಟೆನ್ಷನ್ ಮಾಡಿಕೊಳ್ಳುವುದು ಬೇಡ. ನೀವು ಟೈಮ್ ಹೇಳಿ. ನಾನು ಅತ್ತೆ ಇನ್ನ್ಯಾರು ಬರ್ತಾರೋ ಅವರೆಲ್ಲ ಸೀದಾ ಅಲ್ಲಿಗೇ ಬರ್ತೀವಿ’ ಎಂದು ಫೋನಿಟ್ಟಳು. ‘ಅಪ್ಪಾ ಕ್ಷಮಿಸು’ ಎಂದವನೇ ಚಿಕ್ಕಪ್ಪನಿಗೆ ವಿಷಯ ತಿಳಿಸಿ, ‘ಯಾಕೋ ಮನಸ್ಸು ತಡೆಯಿತ್ತಿಲ್ಲ ಅಮ್ಮನನ್ನ ನಾನೇ ಕರೆ ತರ್ತೇನೆ, ನೀವು ಇಲ್ಲಿನದು ನೋಡಿಕೊಳ್ಳಿ’ ಎಂದವನೇ ಮನೆಯತ್ತ ಹೊರಟ. ದಾರಿಯುದ್ದಕ್ಕು ಅಪ್ಪ ಕಾಡಲಾರಂಭಿಸಿದ. ಇಲ್ಲಿಯವರೆಗು ಕಾಣಿಸಿಕೊಳ್ಳದ ಕಣ್ಣೀರು ಧಾರೆಯಾಗಿ ಹರಿಯತೊಡಗಿತು. ಸಿಗ್ನಲ್‌ನಲ್ಲಿ ಕಾರು ನಿಲ್ಲಿಸಿದಾಗ ಇವನ ಪರಿಸ್ಥಿತಿ ನೋಡಿದ ಪಕ್ಕದ ಗಾಡಿಯವ ಹೆಲ್ಮೆಟ್ ಮೇಲೆತ್ತಿ, ‘ರಸ್ತೆ ಮೆಲೆ ನಿಗಾ ಇರಲಿ, ಇಲ್ಲದಿದ್ರೆ ಇನ್ನೂ ನೋವಾಗತ್ತೆ’ ಎಂದವನೇ ಮತ್ತೆ ಹೆಲ್ಮೆಟ್ ಕೆಳಗಿಳಿಸಿ ಮುಖ ಮರೆಮಾಡಿಕೊಂಡ. ಅಪ್ಪನನ್ನ ಮನೆಗೆ ಕರೆತಾರದೆ ನೇರವಾಗಿ ಕ್ರಿಮೆಟೋರಿಯಮ್‌ಗೆ ಕೊಂಡೊಯ್ಯುವ ಯೋಚನೆಯೇ ಮಿಹಿರನನ್ನು ಕೊಲ್ಲುತ್ತಿತ್ತು. ಋಣ ಅದೂ ಇದೂ ಎಂದು ತೀರಾ ನಂಬಿಕೆಯಿಲ್ಲದಿದ್ದರೂ ಮಾಡಬೇಕಾದ್ದನ್ನ ಮಾಡಲು ಅಪ್ಪ ಎನ್ನುವ ಪದವೇ ಸಾಕಲ್ಲ... ಅಮ್ಮ ಗೋಳಾಡಿದರೆ? ನೆಂಟರು ಇಷ್ಟರು ಎಲ್ಲಾ ಹೇಗೆ ತೆಗೆದುಕೊಳ್ಳುತ್ತಾರೊ? ಚಿಕ್ಕಪ್ಪನೇನೊ ಹೇಳಿಬಿಟ್ಟಿದ್ದ ನೀನೇನು ತಲೆಕೆಡಿಸಿಕೋಬೇಡಾ, ಎಲ್ಲರಿಗೂ ನಾನೆ ವಿಷಯ ತಿಳಿಸ್ತೀನಿ ಇಂತಾ ಊರು, ಈ ಕಾಲದಲ್ಲಿ ಇದೆಲ್ಲಾ ತೀರಾ ಮಾಮೂಲಿ ಎನ್ನುವ ಹಾಗೆ ಚಿಕ್ಕಪ್ಪ ಮಾತಾಡಿದ್ದು ಕೇಳಿ ಮಿಹಿರನಿಗೆ ಆಶ್ಚರ್ಯವಾಗಿತ್ತು.

ಅಪ್ಪ, ಅಪಾರ್ಟ್‌ಮೆಂಟು, ಸೇಲ್ ಡೀಡ್, ಅಮ್ಮ, ಎಲ್ಲ ತಲೆಯಲ್ಲಿ ಸುತ್ತುತ್ತಲೇ ಇದ್ದಿದ್ದರಿಂದ ಮಿಹಿರನಿಗೆ ಅಪಾರ್ಟ್‌ಮೆಂಟ್ ತಲುಪಿದ್ದೂ ತಿಳಿಯಲಿಲ್ಲ. ಎಂದಿನಂತೆ ಸಲ್ಯೂಟ್ ಹೊಡೆದ ಸೆಕ್ಯುರಿಟಿ, ‘ಸಾಬ್ ವಿಷಯ ತಿಳೀತು ಅಪ್ಪಾವರು ಹೋಗಿಬಿಟ್ಟರಂತೆ’ ಎಂದದ್ದು ಅವನು ಹೇಳಬೇಕೆಂದು ಹೇಳಿದನೋ ಅಥವಾ ನಿಜಕ್ಕೂ ಖೇದವಾಗಿದೆಯೋ? ಮಿಹಿರ ಅವನ ಮುಖವನ್ನೇ ನಿರುಕಿಸಿದ. ಕಂಡೂ ಕಾಣದ ಅನುಕಂಪ! ಇವನೆ ವಾಸಿ ತಾವೆಂದಾದರೂ ಇವನ ಕಷ್ಟ ಸುಖಗಳ ಬಗ್ಗೆ ವಿಚಾರಿಸಿದ್ದಿದೆಯಾ? ಹಾಕುವ ತೆರೆಯುವ ಗೇಟಿನಂತೆ ಇವನೂ ಒಂದು ನಿರ್ಜೀವ ವಸ್ತು ಎನ್ನುವಂತೆ ಎಲ್ಲರೂ ಹಾಗೇ ಅವನ ದಾಟಿಕೊಂಡು ಹೋದಾಗಲೆಲ್ಲಾ ಅವನಿಗೆ ನೋವಾಗದೆ?... ಮಿಹಿರ ತಲೆಕೊಡವಿದ. ಲಿಫ್ಟ್ ಬೇಡವೆನಿಸಿ ಹಾಗೇ ಮೆಟ್ಟಿಲೇರತೊಡಗಿದ. ಫ್ಲ್ಯಾಟಿನ ಮುಂದಾಗಲೇ ಜನ ಜಮಾಯಿಸಿ ಬಿಟ್ಟಿದ್ದರು. ಅಪ್ಪ, ಸಾವು, ಬಾಡಿ, ಕ್ರಿಮೇಷನ್ ಇದೇ ಪದಗಳೇ ಅಲ್ಲೂ... ಯಾಕಾದರೂ ಬರುತ್ತದೋ ಈ ಸಾವೆಂಬ ಸಾವು! ಮಿಹಿರ ತಾನೀಗಾಗಲೇ ಮಾಡಿರುವ ವ್ಯವಸ್ಥೆಯ ಬಗ್ಗೆ ಅವರಿಗೆಲ್ಲಾ ತಿಳಿಸಿ, ಕೆಲವರು ಆಗಲೇ ಲಗುಬಗೆಯಿಂದ ಹೊರಡಲನುವಾಗಿ ಮಿಹಿರ ಒಳ ಬಂದ. ಅಮ್ಮನಿಗೆ ತಿಳಿಸಿ ಹೇಳುವ ಅವಶ್ಯಕತೆಯೇ ಇಲ್ಲವೇನೊ... ಅವಳಾಗಲೇ ರೂಮಿನ ಕಿಟಕಿಯ ಬಳಿ ನಿಂತು ಮಿಹಿರನಾಡುತ್ತಿದ್ದ ಮಾತುಗಳ ಕೇಳಿಸಿಕೊಂಡಿದ್ದಳೆಂದು ಸ್ಪಷ್ಟವಾಗಿತ್ತು. ಮುಖದಲ್ಲಿ ಅಂತಹ ಖೇದವೇನೂ ಕಾಣದೆ ಮಿಹಿರ ಅಮ್ಮನ ಗಟ್ಟಿಗತನಕ್ಕೆ ಬೆರಗಾದ. ತನಗೆಂದು ಬರುವುದೋ ಈ ಗಟ್ಟಿಗತನ? ‘ಇನ್ನೂ ನಿನ್ನ ಕೂದಲು ಬೆಳ್ಳಗಾಗಲಿ ತಾಳು’ ಎಂದು ಅಪ್ಪ ಹೇಳಿದಂತಾಗಿ ಆ ಸ್ಥಿತಿಯಲ್ಲೂ ಮಿಹಿರನ ತುಟಿಯಲ್ಲಿ ನಗು ಮೂಡಿತು. ಅಮ್ಮನ ಕಣ್ಣು ಏನೋ ಹೇಳುತ್ತಿದೆಯೆನಿಸಿ ಮಿಹಿರ ಮತ್ತೆ ಗಂಭೀರವಾಗಿ ರೂಮು ಹೊಕ್ಕ. ‘ತಾತ ಇನ್ನು ಮೇಲೆ ಬರುವುದಿಲ್ಲ, ದೇವರು ಕರಕೊಂಡಿದ್ದಾರೆ’ ಎಂದು ರಾಶಿ ಮಕ್ಕಳಿಗೆ ಹೇಳುತ್ತಿದ್ದಳು.

ಅಮ್ಮ ಮಾತಿಲ್ಲದೇ ವಾರ್ಡ್ ರೋಬ್ ತೆರೆದು ಕವರೊಂದನ್ನು ಹಿಡಿದು ಮಂಚದ ಮೆಲೆ ಕೂತಳು. ಅವಳ ಕಣ್ಣು ಮತ್ತೆ ಕರೆಯಿತು. ಮಿಹಿರ ಯಾಕೋ ಅವಳ ಪಕ್ಕ ಕೂಡಲಾರದೆ ನೆಲದ